**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1357 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16.03.2026 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

****

<table>
<tr><th>ಕ್ರ.ಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>(ಅ)</td><td>ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ಗೋದಾಮುಗಳಲ್ಲಿ (warehouse) ಔಷಧಿಗಳ ತೀವ್ರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td>(ಆ)</td><td>ಬಜೆಟ್‌ನಲ್ಲಿ ನಿಗದಿಪಡಿಸಿದ 496 ಮಾದರಿಯ ಔಷಧಿಗಳ ಪೈಕಿ ಪ್ರಸ್ತುತ ಕೇವಲ 120 ರಿಂದ 180 ಮಾದರಿಯ ಔಷಧಿಗಳು ಮಾತ್ರ ಲಭ್ಯವಿರುವುದು ನಿಜವೇ; ಆಗಿದ್ದಲ್ಲಿ, ಉಳಿದ ಔಷಧಿಗಳ ಲಭ್ಯತೆ ಇಲ್ಲದಿರಲು ಕಾರಣಗಳೇನು;</td><td>ಹಿಂದಿನ ಟೆಂಡರ್‌ಗಳಲ್ಲಿ ಏಪ್ರಿಲ್-2025 ರಿಂದ ಮಾರ್ಚ್-2026ರವರೆಗೂ ಖರೀದಿಗೊಂಡು ಜಿಲ್ಲಾ ಔಷಧ ಉಗ್ರಾಣಗಳಿಗೆ ಸರಬರಾಜುಗೊಂಡ ಔಷಧಗಳ ಸರಬರಾಜು ವಿವರ ಈ ಕೆಳಕಂಡಂತೆ ಇದೆ:-
<table>
<tr><th>ಕ್ರ.ಸಂ</th><th>ವಿವರ</th><th>ಒಟ್ಟು ಔಷಧಿಗಳ ಸಂಖ್ಯೆ</th><th>ಔಷಧಿಗಳ ಮೌಲ್ಯ (ಕೋಟಿಗಳಲ್ಲಿ)</th></tr>
<tr><td>1.</td><td>Health Drugs</td><td>204</td><td>1,45,50,74,124</td></tr>
<tr><td>2.</td><td>Programme Drugs</td><td>52</td><td>86,66,47,788.4</td></tr>
<tr><td colspan="2">Total</td><td>256</td><td>2,32,17,21,912</td></tr>
</table>
ಪ್ರಸ್ತುತ ಔಷಧ ಉಗ್ರಾಣಗಳಲ್ಲಿ ಲಭ್ಯವಿರುವ ಔಷಧಗಳ ಸಂಖ್ಯೆ ಈ ಕೆಳಕಂಡಂತೆ ಇದೆ.
<table>
<tr><th>Sl.No</th><th>Details</th><th>1-2 Months Stock</th><th>More than 2 Months</th><th>Total Available Drugs</th></tr>
<tr><td>1</td><td>Warehouse Stock</td><td>119</td><td>64</td><td>183</td></tr>
</table>
ರಾಜ್ಯ ಸರ್ಕಾರ ಔಷಧ ಉಗ್ರಾಣಗಳಿಗೆ ಔಷಧಗಳನ್ನು ಪೂರೈಸಲು 2025-26ನೇ ಸಾಲಿನ ಔಷಧ ಖರೀದಿ</td></tr>
</table>

<table>
<tr>
<td></td>
<td></td>
<td>ಪ್ರಕ್ರಿಯೆಯನ್ನು KSMSCL ಸಂಸ್ಥೆಯು ಪ್ರಾರಂಭಿಸಿದೆ.<br><br>ಅದರಂತೆ, KSMSCL ಸಂಸ್ಥೆಯು, 496 ಔಷಧಗಳಿಗೆ ಒಟ್ಟು 38 ಟೆಂಡರ್‌ಗಳನ್ನು ಆಹ್ವಾನಿಸಿ ಒಟ್ಟು 20 ಟೆಂಡರ್‌ಗಳನ್ನು ಪೂರ್ಣಗೊಳಿಸಿ 155 ಔಷಧಗಳಿಗೆ Notification of Award ನೀಡಲಾಗಿರುತ್ತದೆ. 41 ಔಷಧಗಳು ಈಗಾಗಲೇ ಜಿಲ್ಲಾ ಔಷಧ ಉಗ್ರಾಣಗಳಿಗೆ ಸರಬರಾಜು ಆಗಿರುತ್ತದೆ. ಹಾಗೂ ಬಾಕಿ ಇರುವ ಔಷಧಗಳು ಸರಬರಾಜು ಹಂತದಲ್ಲಿರುತ್ತದೆ.<br><br>ಔಷಧ ಉಗ್ರಾಣಗಳಲ್ಲಿ ಲಭ್ಯತೆ ಇಲ್ಲದ ಔಷಧಗಳಿಗೆ ಖರೀದಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಸರ್ಕಾರದ ಆದೇಶದನ್ವಯ ಸ್ಥಳೀಯ ಔಷಧ ಖರೀದಿಗೆ KSMSCL ಬ್ಯಾಂಕ್ ಖಾತೆಯಿಂದ 30 ಕೋಟಿ ಮೊತ್ತವನ್ನು SAST ಗೆ ಬಿಡುಗಡೆ ಮಾಡಲಾಗಿದ್ದು, ಅದನ್ನು ಆರೋಗ್ಯ ಸಂಸ್ಥೆಗಳಿಗೆ ಮರು ಬಿಡುಗಡೆ ಮಾಡುವ ಮೂಲಕ ತುರ್ತು ಅವಶ್ಯಕತೆಗಳಿಗೆ ಅಗತ್ಯ ಔಷಧಿಗಳನ್ನು ಸ್ಥಳೀಯವಾಗಿ ಖರೀದಿಸಿ ಔಷಧಗಳ ಲಭ್ಯತೆಯನ್ನು ಮಾಡಲು ಆರೋಗ್ಯ ಸಂಸ್ಥೆಗಳು ಕ್ರಮ ವಹಿಸುತ್ತಿದೆ.<br><br>ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯತೆ ಇಲ್ಲದ ಔಷಧಗಳನ್ನು ರಾಷ್ಟ್ರೀಯ ಉಚಿತ ಸೇವೆಗಳ ಕಾರ್ಯಕ್ರಮ, AB-Ark/ARS/NFDS/15th Finance Commission ಅನುದಾನಗಳಿಂದ, ನಿಯಮಾನುಸಾರ ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆಯೊಂದಿಗೆ, ಸ್ಥಳೀಯ ಖರೀದಿ ಮಾಡಲು ಅವಕಾಶ ನೀಡಲಾಗಿದೆ.<br><br>ಪ್ರಸ್ತುತ ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯವಿರುವ ಔಷಧಗಳ ಸಂಖ್ಯೆ ಈ ಕೆಳಕಂಡಂತಿದೆ.<br><br>
<table>
<tr><th>Sl.No</th><th>Details</th><th>1-2 Months Stock</th><th>More than 2 Months stock</th><th>Total Available</th></tr>
<tr><td>1</td><td>Institution Stock</td><td>343</td><td>144</td><td>487</td></tr>
</table>
</td>
</tr>
<tr>
<td>(ಇ)</td>
<td>ರಾಜ್ಯದ ಹಲವು ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಅಗತ್ಯ ಔಷಧಿಗಳಿಲ್ಲದೆ ರೋಗಿಗಳು ಖಾಸಗಿ ಮೆಡಿಕಲ್ ಸ್ಟೋರ್‌ಗಳಿಂದ ಔಷಧಿ ಖರೀದಿಸುವಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ರಾಜ್ಯದ ಹಲವು ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಅಗತ್ಯ ಔಷಧಿಗಳನ್ನು ಸಂಗ್ರಹಿಸಲು ಎಲ್ಲಾ ಹಂತದ ಆರೋಗ್ಯ ಕೇಂದ್ರಗಳಲ್ಲಿ AbArk ಹಾಗೂ ARS ಅನುದಾನಗಳನ್ನು ಬಳಸಿಕೊಂಡು ಖರೀದಿಸ ಬಹುದಾಗಿರುತ್ತದೆ.<br><br>ಮುಂದಿನ ದಿನಗಳಲ್ಲಿ ಔಷಧಿ ಕೊರತೆ ಉಂಟಾಗದಂತೆ ವಹಿಸಲಾದ ಕ್ರಮಗಳು ಕೆಳಕಂಡಂತಿವೆ.<br>1. ವಾರ್ಷಿಕ ಇಂಡೆಂಟ್ ಔಷಧಿಗಳ ಖರೀದಿ ಪ್ರಸ್ತಾಪವನ್ನು ಅಂದಾಜು ಮೌಲ್ಯ ರೂ.880.68 ಕೋಟಿ ಯಂತೆ ಸರ್ಕಾರದ ಆದೇಶ</td>
</tr>
</table>

<table>
<tr>
<td></td>
<td></td>
<td>ಸಂಖ್ಯೆ:ಆಕುಕ 129 ಎಫ್ ಪಿ ಆರ್ 2025, ದಿನಾಂಕ:1.08.2025 ಮತ್ತು ದಿ.04.08.2025ರಂತೆ ಬಹುತೇಕ ಅಗತ್ಯ ಔಷಧಿಗಳನ್ನು KSMSCL ವತಿಯಿಂದ ತ್ವರಿತವಾಗಿ ಖರೀದಿಸಿ ಹಾಗೂ ವಿತರಿಸಲು ಕ್ರಮ ಕೈಗೊಳಲಾಗುತ್ತಿದೆ.<br>2. ಸರ್ಕಾರದ ಆದೇಶ ಸಂಖ್ಯೆ:ಆಕುಕ 33 ಎಫ್ ಪಿ ಆರ್ 2026, ದಿನಾಂಕ:18.02.2026. ರಂತೆ ತಾತ್ಕಾಲಿಕವಾಗಿ ಎರಡು ತಿಂಗಳ ಅವಧಿಗೆ ರೂ.3,000.00ಲಕ್ಷಗಳ ಅನುದಾನವನ್ನು ಜಿಲ್ಲೆಗಳಲ್ಲಿ ಹಾಗೂ ಸ್ಥಳೀಯವಾಗಿ ಅಗತ್ಯ ಔಷಧಿಗಳನ್ನು ಖರೀದಿಸಿ ಬಳಸಲು ಅನುಮತಿ ನೀಡಿರುತ್ತದೆ.</td>
</tr>
<tr>
<td>(ಈ)</td>
<td>ಹೊಸದಾಗಿ 496 ಮಾದರಿಯ ಔಷಧಿಗಳ ಖರೀದಿ ಪ್ರಕ್ರಿಯೆ ಯಾವ ಹಂತದಲ್ಲಿದೆ; ಗೋದಾಮುಗಳಲ್ಲಿ ಶೂನ್ಯ ದಾಸ್ತಾನು (zero stock) ಇರುವುದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು?</td>
<td>ಪ್ರಸ್ತುತ ಖರೀದಿ ಪ್ರಕ್ರಿಯೆಯ ವಿವಿಧ ಹಂತದಲ್ಲಿರುವ 496 ಔಷಧಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ವಿವರಣೆ</th><th>ಔಷಧಿಗಳ ಸಂಖ್ಯೆ</th></tr>
<tr><td>1.</td><td>KSMSCL ಮೂಲಕ ಫ್ಲೋಟ್ ಮಾಡಿದ ಟೆಂಡರ್‌ಗಳು (ದಿನಾಂಕ 25.11.25 ರಂತೆ):</td><td>496 Drugs</td></tr>
<tr><td>2.</td><td>ವಿತರಿಸಲಾದ NOA ಗಳ ಒಟ್ಟು ಸಂಖ್ಯೆ:</td><td>155 Drugs</td></tr>
<tr><td>3.</td><td>ವಿತರಿಸಲಾದ PO ಗಳ ಒಟ್ಟು ಸಂಖ್ಯೆ:</td><td>77 Drugs</td></tr>
<tr><td>4.</td><td>ಟೆಂಡರ್ ಪ್ರಕ್ರಿಯೆಯಲ್ಲಿ ವಿವಿಧ ಹಂತಗಳಲ್ಲಿ ಇರುವ ಔಷಧಿಗಳು</td><td>216 Drugs</td></tr>
<tr><td>5.</td><td>ಮರುಟೆಂಡರ್ ಮಾಡಬೇಕಾಗಿರುವ ಔಷಧಗಳು</td><td>125 Drugs</td></tr>
</table>
125 ಔಷಧಿಗಳಿಗೆ Zero ಮತ್ತು Non Responsive ಬಿಡ್ ಸ್ವೀಕೃತಿಯಾಗಿದ್ದು, Potential ಬಿಡ್ದಾರರೊಂದಿಗೆ ಸಂಧಾನ ನಡೆಸಿ, ಔಷಧಗಳನ್ನು ಮರುಟೆಂಡರ್ ಆಹ್ವಾನಿಸಲು ಕ್ರಮಕೈಗೊಳ್ಳಲಾಗುತ್ತಿದೆ ಖರೀದಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ರೋಗಿಗಳ ಚಿಕಿತ್ಸೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ಮಧ್ಯಂತರ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ.<br><br>ಸರ್ಕಾರದ ಆದೇಶದನ್ವಯ ಸ್ಥಳೀಯ ಔಷಧ ಖರೀದಿಗೆ KSMSCL ಬ್ಯಾಂಕ್ ಖಾತೆಯಿಂದ 30 ಕೋಟಿ ಮೊತ್ತವನ್ನು SAST ಗೆ ಬಿಡುಗಡೆ ಮಾಡಲಾಗಿದ್ದು, ಅದನ್ನು ಆರೋಗ್ಯ ಸಂಸ್ಥೆಗಳಿಗೆ ಮರು ಬಿಡುಗಡೆ ಮಾಡುವ ಮೂಲಕ ತುರ್ತು ಅವಶ್ಯಕತೆಗಳಿಗೆ ಅಗತ್ಯ ಔಷಧಿಗಳನ್ನು ಸ್ಥಳೀಯವಾಗಿ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಆರೋಗ್ಯ ಸಂಸ್ಥೆಗಳು ಅಗತ್ಯವಿರುವ ಔಷಧಿಗಳನ್ನು</td>
</tr>
</table>

| | | |
|---|---|---|
| | | Government e-Marketplace (GeM) ಮೂಲಕ ನೇರ ಖರೀದಿ ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br>PHC/CHC/TH ಮಟ್ಟದ ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಸುಮಾರು 18 ಅತ್ಯವಶ್ಯಕ ಔಷಧಿಗಳನ್ನು ಗುರುತಿಸಲಾಗಿದ್ದು, ಅವುಗಳ ಉಗ್ರಾಣ ಮಟ್ಟದ ಸಂಗ್ರಹ ಕಡಿಮೆಯಾಗಿದೆ ಹಾಗೂ ಅವುಗಳಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ಮೌಲ್ಯಮಾಪನ ಹಂತದಲ್ಲಿದೆ. ಈ ಔಷಧಿಗಳು ಕರ್ನಾಟಕ ಆಂಟಿಬಯೋಟಿಕ್ಸ್ ಅಂಡ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್ (Karnataka Antibiotics and Pharmaceuticals Limited – KAPL) ಸಂಸ್ಥೆಯಲ್ಲಿ ತಕ್ಷಣ ಲಭ್ಯವಿರುವುದರಿಂದ, ಅವುಗಳಲ್ಲಿ ಅಗತ್ಯವಿರುವ ಎರಡು ತಿಂಗಳ ಪ್ರಮಾಣವನ್ನು ಖರೀದಿಸಲು 4G ವಿನಾಯಿತಿ ಪಡೆಯುವ ಮೂಲಕ ಖರೀದಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ, ಇದರಿಂದ ಅವುಗಳನ್ನು ಆರೋಗ್ಯ ಸಂಸ್ಥೆಗಳಿಗೆ ತಕ್ಷಣ ಪೂರೈಕೆ ಮಾಡಲು ಕ್ರಮಹಿಸಲಾಗುತ್ತಿದೆ. |

**ಸಂಖ್ಯೆ: ಆಕುಕ 21 ಎಸ್‌.ಟಿ.ಕ್ಯೂ. 2026**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು